ಆಗಲಿಲ್ಲ. ಆದಕ್ಕಾಗಿ ನಾನು ವಿನಂತಿ ಮಾಡುತ್ತಿದ್ದೇನೆ ಪರಿಹಾರ ಏನಾದರೂ ಕೊಡುತ್ತೇವೆಂದು ತಾವು ಉತ್ತರ ಹೇಳಬೇಕು.

ಉಪಾಧ್ಯಕ್ಷರು:- ಮಾನ್ಯ ಮಂತ್ರಿಗಳು ತಾವು ಏನಾದರೂ ಹೇಳುತ್ತೀರಾ?

ಶ್ರೀ ಸಿ. ಬೈರೇಗೌಡ:- ಎಷ್ಟು ನಯವಾಗಿ ಮಾನ್ಯ ರಾಜಶೇಖರಮೂರ್ತಿಯವರು ಜಾಗ ಬಿಡಿಸಿಕೊಂಡು ಹೇಳುತ್ತಿದ್ದಾರೆ ನೋಡಿ.

ಶ್ರೀ ಎಂ. ರಾಜಶೇಖರಮೂರ್ತಿ:- ಮಾನ್ಯ ಸದಸ್ಯರಿಗೆ ರೈತರ ಬಗ್ಗೆ ಎಷ್ಟು ಆಸಕ್ತಿಯಿದೆ ಅಷ್ಟೇ ಆಸಕ್ತಿ ಸರ್ಕಾರಕ್ಕೂ ಇದೆ. ರೈತರು ಕೊಡಬೇಕಾದ ಸಾಲಕ್ಕೆ ಯಾವ ರೀತಿ ರಿಲೀಫ್ ಕೊಡುತ್ತೀರಿ ಎಂದು ಹೇಳಿದ್ದಾರೆ. ಈಗಾಗಲೇ ಕೋ-ಆಪರೇಟಿವ್ ಡಿಪಾರ್ಟ್‌ಮೆಂಟ್ has issued instructions to all the District Central Co-operative Banks to obtain required certificates from the Deputy Commissioners and initiated action to convert short term loan to medium term loan in consultation with the State Co-operative Apex Bank Ltd., and NABARD.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅದರಲ್ಲಿ ಏನಿದೆ?

ಶ್ರೀ ಎಂ. ರಾಜಶೇಖರಮೂರ್ತಿ:- ಶಾರ್ಟ್‌ಟರ್ಮ್ ಲೋನ್ ಅನ್ನು ಮಿಡಿಯಂ ಟರ್ಮ್ ಲೋನ್ ಆಗಿ ಕನ್ವರ್ಟ್ ಮಾಡಲಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಶಾರ್ಟ್‌ಟರ್ಮ್ ಲೋನನ್ನು ಮಿಡಿಯಂಟರ್ಮ್ ಲೋನ್ ಆಗಿ ಕನ್ವರ್ಟ್ ಮಾಡಿದರೆ ರೈತನಿಗೆ ಬೆಳೆ ನಷ್ಟವಾಗಿರುವಾಗ ಅವನು ಎಲ್ಲಿಂದ ತಂದು ವಾಪಸ್ಸು ಕೊಡುತ್ತಾನೆ?

ಉಪಾಧ್ಯಕ್ಷರು:- ಮಾನ್ಯ ಸದಸ್ಯರು ಸಮಾಧಾನದಿಂದ ಇರಿ, ಮಂತ್ರಿಗಳು ಏನು ಹೇಳುತ್ತಾರೆ ಕೇಳಿ?

(ಈ ಸಂದರ್ಭದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಅಧ್ಯಕ್ಷರ ಪೀಠದ ಮುಂದೆ ಮಾತನಾಡುತ್ತಿದ್ದರು. ನಂತರ ಬಾವಿಯೊಳಗೆ ಬಂದರು)

ಉಪಾಧ್ಯಕ್ಷರು:- ಈಗ ಮಂತ್ರಿಗಳು ಈಲ್ಡ್ ಆಗಿಲ್ಲ. ಅವರು ಏನು ಹೇಳುತ್ತಾರೆ ಹೇಳಲಿ.

ಶ್ರೀ ಟಿ.ಎಂ. ಮಂಜುನಾಥ್:- ಮಾನ್ಯ ಭಾರತೀಯ ಜನತಾ ಪಕ್ಷದವರು ಪ್ರಚಾರಕ್ಕೋಸ್ಕರ ಸರ್ಕಾರದ ಮೇಲೆ ಆಪಾದನೆ ಮಾಡುತ್ತಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು:- ಮಾನ್ಯ ಸದಸ್ಯರು ಬಾವಿಯೊಳಗಿನಿಂದ ಮಾತನಾಡಿದರೆ ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ದಯವಿಟ್ಟು ಮಾತನಾಡುವವರು ನಿಮ್ಮ ನಿಮ್ಮ ಜಾಗಗಳಿಗೆ ಹೋಗಿ ಮಾತನಾಡಿ. ಮಂತ್ರಿಗಳು ಈಲ್ಡ್ ಆಗಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಕಂದಾಯ ಸಚಿವರೇ ಒಂದು ನಿಮಿಷ.

ಶ್ರೀ ಟಿ.ಎಂ. ಮಂಜುನಾಥ್:- ರೋಷ, ಆವೇಶಗಳಿಂದ ರೈತರ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗುವುದಿಲ್ಲ. ಸಮಸ್ಯೆಗಳನ್ನು ಯಾವರೀತಿ ಪರಿಹಾರ ಮಾಡಬೇಕೆಂದು ನಮ್ಮ ರೆವಿನ್ಯೂ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ರೋಷ ಆವೇಶಗಳಿಗೆ ಆಸ್ಪದವಿಲ್ಲ. ರೋಷ